ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಬಸ್‌ನಿಂದ ಅಪರಾಧವಾಗಿದೆ.

ಶ್ರೀ ವಿ. ಎಂ. ಘಾಡಿ.—ಒಬ್ಬ ವ್ಯಕ್ತಿ ಸತ್ತಿರುವುದು ನಿಜವೇ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಡ್ರೈವರ್ ಸತ್ತಿದ್ದಾನೆ.

ಶ್ರೀ ವಿ. ಎಂ. ಘಾಡಿ.—ಡಿಪಾರ್ಟ್‌ಮೆಂಟಿನವರು ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ?

ಶ್ರೀ ಎಂ. ಎಂ. ಜೆ. ಸದ್ಯೋಜಾತ. —ಬಸ್‌ನ ಡ್ರೈವರ್ ಮತ್ತು ಕಂಡಕ್ಟರನ್ನು ಸಸ್‌ಪೆನ್‌ಷನ್‌ನಲ್ಲಿಟ್ಟಿದ್ದೇವೆ.

ಶ್ರೀ ವಿ. ಎಂ. ಘಾಡಿ.—ಸತ್ತಂಥ ವ್ಯಕ್ತಿಗೆ ಕಾಂಪೆನ್ಸೇಷನ್ ಏನು ಕೊಟ್ಟಿದ್ದೀರಿ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಕಾಂಪನ್ಸೇಷನ್ ಕೊಟ್ಟಿಲ್ಲ.

ಶ್ರೀ ವಿ. ಎಂ. ಘಾಡಿ.—ಇಂಥ ಘಟನೆಯಲ್ಲಿ ಪ್ರತಿಯೊಂದು ಸಲವೂ ಕಾಂಪನ್‌ಸೇಷನ್ ಕೊಡಲಾಗಿದೆ, ಆದರೆ ಈ ಪ್ರಕರಣದಲ್ಲಿ ಏಕೆ ಕಾಂಪನ ಸೇಷನ್ ಕೊಟ್ಟಿಲ್ಲ? ಕಾರಣವೇನು?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈ ವಿಷಯ ಇನ್‌ವೆಸ್ಟಿಗೇಷನ್ ಹಂತದಲ್ಲಿರುವುದರಿಂದ ಇನ್ನೂ ಅವರಿಗೆ ಕಾಂಪನ್ಸೇಷನ್ ಕೊಟ್ಟಿಲ್ಲ.

Licence issued for Toddy Arrack and Bar in Tumkur Town

407 SRI S SHAFI AHMED (Tumkur).- Will the Chief Minister be pleased to state:—

(a) the total number of Toddy/Arrack and Bar Licences issued in Tumkur City;

(b) the total Revenue of Excise Commodities collected in Tumkur District for the last one year?

SRI R. GUNDU RAO (Chief Minister).—

(a) The total number of Toddy, Arrack and Bar Licences issued in Tumkur City are as follows:

(1) Toddy Shops Nine (9)
(2) Arrack Shops Eight (8)
(3) Bars Three (3)

(b) The total revenue realised in Tumkur District for the year 1978 79 is Rs. 2,19,93,043-56.

ಶ್ರೀ ಎಸ್. ಷಫಿ ಅಹಮದ್.—ತುಮಕೂರಿನಲ್ಲಿ ಸೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ತೆರೆಯುವುದಕ್ಕೆ ಯೂನಿವರ್ಸಿಟಿ ಮತ್ತು ಕಮ್ಯುನಿಟಿ ಸೆಂಟರ್‌ಗಳ ಹತ್ತಿರ ಲೈಸೆನ್ಸ್ ಕೊಟ್ಟಿದ್ದಾರೆ. ಹರಿಜನರ ಕಾಲೋನಿಯ ಪಕ್ಕದಲ್ಲಿಯೇ ಇದಕ್ಕೆ ಲೈಸೆನ್ಸ್ ಕೊಟ್ಟಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ, ತುಮಕೂರಿನಲ್ಲಿ ಸೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ತೆರೆಯುವುದಕ್ಕೆ ಎಷ್ಟು ಲೈಸೆನ್ಸ್ ಕೊಡಲಾಗಿದೆ ಎಂದು ನಾವು ಅದಕ್ಕೆ ಇಷ್ಟು ಅಂಗಡಿಗಳಿಗೆ ನಾವು ಪರವಾನೆಯನ್ನು ಕೊಟ್ಟಿದ್ದೇವೆಂದು ಹೇಳಿದ್ದೇವೆ. ಇದರಿಂದ ಆದಾಯವೆಷ್ಟು ಬರುತ್ತದೆಂದು ಕೇಳಿದ್ದಾರೆ ನಾವು ಇಷ್ಟು ಆದಾಯ ಬರುತ್ತದೆಂದು ಹೇಳಿದ್ದೇವೆ.

ಶ್ರೀ ಎಂ. ಚಂದ್ರಶೇಖರಿರ್.—ಮಾನ್ಯ ಸದಸ್ಯರು ಸಪ್ಲಿಮೆಂಟರಿ ಕೇಳುವುದು ಯಾವ ಯಾವ ಪ್ರದೇಶದಲ್ಲಿ ಸೇಂದಿ ಅಂಗಡಿಗಳನ್ನು ತೆರೆಯುವುದಕ್ಕೆ ಪರವಾನೆಯನ್ನು ಕೊಡಲಾಗಿದೆ ಈರೀತಿ ಪರವಾನೆಯನ್ನು ಕೊಡುವುದಕ್ಕೆ ನಿಯಮಗಳು ಇಲ್ಲವೆ? ಎಂದು.

ಶ್ರೀ ಆರ್ ಗುಂಡೂರಾವ್.—ಮಾನ್ಯ ಸದಸ್ಯರು ಎಲ್ಲೆಲ್ಲಿ ಸಾರಾಯಿ ಅಂಗಡಿಗಳು ಇವೆಯೆಂದು ಕೇಳಿದ್ದರೆ ನಾವು ಇಂತಿಂಥ ಕಡೆ ಇವೆಯೆಂದು ಹೇಳುತ್ತಿದ್ದೆವು.

ಶ್ರೀ ಪಂಪಾಪತಿ.—ಸೇಂದಿ ಅಂಗಡಿಯಲ್ಲಿ ಮಾರಾಟ ಮಾಡತಕ್ಕ ಸೇಂದಿ ನಿಜವಾಗಿಯೂ ಮರದಿಂದ ಇಳಿಸಿರತಕ್ಕದ್ದೇ ಅಥವಾ ಪೆಡಿಸಿನ್ ಮಿಕ್ಸ್ ಮಾಡಿರತಕ್ಕದ್ದೇ? ಮಿಕ್ಸ್ ಮಾಡಿ ಮಾರಾಟ ಮಾಡುವುದಕ್ಕೆ ತಾವು ಪರವಾನೆಯನ್ನು ಕೊಟ್ಟಿದ್ದೀರಾ?

ಶ್ರೀ ಆರ್. ಗುಂಡೂರಾವ್.—ಅವನ್ನು ಯಾವ ರೀತಿಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಿಲ್ಲ. ಮಾಮೂಲು ಯಾವರೀತಿಯಲ್ಲಿ ಸೇಂದಿಯನ್ನು ಮಾರಾಟ ಮಾಡುತ್ತಾರೋ ಅದೇ ರೀತಿಯಲ್ಲಿ ಈಗಲೂ ಕೊಡಲಾಗಿದೆ.

ಶ್ರೀ ಪಂಪಾಪತಿ.—ಮಾನ್ಯ ಮುಖ್ಯ ಮಂತ್ರಿಗಳು ಸೇಂದಿ ಅಂಗಡಿಗಳವರು ಮಾರಾಟ ಮಾಡತಕ್ಕ ಸೇಂದಿ ನಿಜವಾಗಿಯೂ ಯಾವ ಸೇಂದಿ ಎನ್ನುವುದನ್ನು ತಿಳಿದುಕೊಳ್ಳಬೇಕು? ಮತ್ತು ಇಡೀ ರಾಜ್ಯದಲ್ಲಿ ಕಲಬೆರಕೆ ಸೇಂದಿಯನ್ನು ಮಾರಾಟ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸುವುದಕ್ಕೆ ಸರ್ಕಾರವು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಆರ್. ಗುಂಡೂರಾವ್.—ಈ ಪ್ರಶ್ನೆ ಈಗ ಉದ್ಭವವಾಗುವುದಿಲ್ಲ. ಇಂಥ ಕಡೆ ಕಲಬೆರಕೆ ಸೇಂದಿಯನ್ನು ಮಾರುತ್ತಿದ್ದಾರೆಂದು ನಮಗೆ ದೂರು ಬಂದರೆ ಆಗ ನಾವು ಸಂಬಂಧಪಟ್ಟವರನ್ನು ಕಳುಹಿಸಿ ವಿಚಾರ ಮಾಡಿಸುತ್ತೇವೆ.

ಶ್ರೀ ಎಸ್. ಷಫಿ ಅಹಮದ್.—ತುಮಕೂರಿನಲ್ಲಿ ಕಾಲೇಜುಗಳ ಪಕ್ಕದಲ್ಲಿ ಹರಿಜನರ ಕಾಲೋನಿಯ ಪಕ್ಕದಲ್ಲಿ ಸೇಂದಿಯ ಅಂಗಡಿಗಳಿಗೆ ಪರವಾನೆಯನ್ನು ಕೊಟ್ಟಿದ್ದಾರೆ ಇವಕ್ಕೆ ಕಾನೂನು ಪ್ರಕಾರ ಅವಕಾಶ ವಿಲ್ಲ. ಕ್ರಮತೆಗೆದುಕೊಳ್ಳುವಿರಾ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಕಾನೂನು ಪ್ರಕಾರ ವಿಚಾರ ಮಾಡಿಸುತ್ತೇನೆ.

Revised Scales of Pay

431 SRI KADIDAL DIVAKAR (Thirthahalli)—Will the Minister for Finance and Planning be pleased to state:—

(a) the total number of the Government Servants working in Government Departments or the local bodies institutions who have not drawn the revised scales of 1970 and 1977;

(b) the reasons why they have been denied these scales?

SRI VEERAPPA MOILY (Minister for Finance and Planning).—

(a) Number cannot be accurately computed because the concerned employees are free to opt or not to opt for the relevant pay scales.

(b) The right of opting to the relevant scale has been conferred on the employees. But Law does not compel the employees to opt for the revised scales only.